# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆ

ಎ.ಡಿ.ಆರ್. ಕಟ್ಟಡ, ಹಳೆಯ ನ್ಯಾಯಾಲಯಗಳ ಸಂಕೀರ್ಣ, ಪಿ.ಜೆ.ಬಡಾವಣೆ, ದಾವಣಗೆರೆ-577002.

# DISTRICT LEGAL SERVICES AUTHORITY, DAVANGERE

A.D.R. BUILDING, OLD COURT COMPLEX, P.J.EXTENSION, DAVANGERE-577002.

Telephone: 08192-296364

E mail-dlsadavangere4@gmail.com


ಸಂಖ್ಯೆ/ಡಿಎಲ್‌ಎಸ್‌ಎ-ಡಿವಿಜಿ/16/2025

ದಿನಾಂಕ: 15-09-2025

## ಅಧಿಸೂಚನೆ

ವಿಷಯ: ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಿಗೆ ಅರೆಕಾಲಿಕ ಕಾನೂನು ಸ್ವಯಂ ಸೇವಕರ ಪಟ್ಟಿಯನ್ನು ಪರಿಷ್ಕರಿಸುವ/ಹೊಸದಾಗಿ ಆಯ್ಕೆ ಮಾಡುವ ಕುರಿತು.

ಉಲ್ಲೇಖ: 1.ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ಪತ್ರ ಸಂಖ್ಯೆ:01/ಪಿಎಲ್‌ವಿ/2025, ದಿನಾಂಕ:12-09-2025.

2.ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ಯೋಜನೆಯ (ಪರಿಷ್ಕೃತ) ನಿಯಮಗಳು.

****

ಗೌರವಾನ್ವಿತ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ಯೋಜನೆಯ (ಪರಿಷ್ಕೃತ) ನಿಯಮಗಳು ಹಾಗೂ ಮಾನ್ಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪತ್ರದನ್ವಯ ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲೆಯ ನಾಲ್ಕು ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಿಂದ ನೀಡಲಾಗುತ್ತಿರುವ ಕಾನೂನು ನೆರವು ಹಾಗೂ ಎಲ್ಲಾ ರೀತಿಯ ಕಾನೂನು ಸೇವೆಗಳ ಕಾರ್ಯಚಟುವಟಿಕೆಗಳಿಗೆ ತೊಡಗಿಸಿಕೊಳ್ಳಲು/ಸೇವೆಗಳನ್ನು ಒದಗಿಸುವ ಸಲುವಾಗಿ ಅರೆಕಾಲಿಕ ಕಾನೂನು ಸ್ವಯಂ ಸೇವಕರನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಆದ್ದರಿಂದ ಪ್ರಸ್ತುತ ಅಧಿಸೂಚನೆಯ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:08-10-2025.**

### ಅರೆಕಾಲಿಕ ಸ್ವಯಂ ಸೇವಕರು ಯಾರಾಗಬಹುದೆಂದರೆ;

1) ಶಿಕ್ಷಕರು(ನಿವೃತ್ತ ಶಿಕ್ಷಕರು ಸೇರಿ), 2) ಮಾಜಿ ಗ್ರಾಮಪಂಚಾಯತಿ ಸದಸ್ಯರು, 3)ನಿವೃತ್ತ ಸರ್ಕಾರಿ ನೌಕರರು, 4)ಹಿರಿಯ ನಾಗರೀಕರು, 5)ಸಮಾಜದ ಬಗ್ಗೆ ಕಳಕಳಿ ಇರುವ ಸಮಾಜಿಕ ಕಾರ್ಯಕರ್ತರು, 6)ಮಹಿಳೆಯರು, 7)ಲಿಂಗತ್ವ ಅಲ್ಪಸಂಖ್ಯಾತರು, 8)ಬುಡಕಟ್ಟು ಜನಾಂಗದವರು, 9)ತುಳಿತಕ್ಕೆ ಒಳಗಾದ ವರ್ಗದ ಜನರು, 10)ಎಂ.ಎಸ್.ಡಬ್ಲ್ಯೂ ವಿದ್ಯಾರ್ಥಿಗಳು, 11)ಉಪನ್ಯಾಸಕರು, 12)ಅಂಗನವಾಡಿ ಕಾರ್ಯಕರ್ತೆಯರು, 13)ವೈದ್ಯರು, 14) ಕಾನೂನು ವಿದ್ಯಾರ್ಥಿಗಳು (ವಕೀಲರಾಗಿ ನೋಂದಾಣಿ ಆಗುವವರೆಗೂ), 15) ಪ್ರಾಪ್ತ ವಯಸ್ಕ ವಿದ್ಯಾರ್ಥಿಗಳು, 16)ರಾಜಕೀಯವಲ್ಲದ ಸಂಘ

Scanned with OKEN Scanner

ಸಂಸ್ಥೆಗಳ ಸದಸ್ಯರು, 17)ಸೇವಾ ಮನೋಭಾವವಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಸದಸ್ಯರು, 18) ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು, 19)ಮೈತ್ರಿ ಸಂಘಗಳ ಸದಸ್ಯರು, 20)ವಿದ್ಯಾವಂತ ಉತ್ತಮ ನಡೆತೆಯುಳ್ಳ ಯಾವುದೇ ವ್ಯಕ್ತಿ, 21)ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಗಳ ವಿಧವೆಯುರು, 22)ಮಾಜೀ ಸೈನಿಕರು ಅಥವಾ ಅವರ ಅವಲಂಭಿತರು, 23)ಸದ್ಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಪತಿ/ಪತ್ನಿ ಮತ್ತು ಅವರ ಪ್ರಾಪ್ತ ವಯಸ್ಕ ಮಕ್ಕಳು, 24)ಹೆಚ್ಚಿನ ಅವಧಿ ಕಾರಾಗೃಹದಲ್ಲಿ ಕಳೆಯುತ್ತಿರುವ ಅಪರಾಧಿಗಳು ಮತ್ತು 25)ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯವರು ಪಿಎಲ್‌ವಿ ಎಂದು ನಿರ್ಧರಿಸುವ ಇತರೆ ವ್ಯಕ್ತಿಗಳು.

ಜಿಲ್ಲೆಯ ಹಾಗೂ ಆಯಾ ತಾಲ್ಲೂಕುಗಳಿಂದ ಗೌರವ ಧನದ ಆಧಾರದ ಮೇರೆಗೆ ಆಸಕ್ತ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಇಚ್ಚೆಯ ಪತ್ರವನ್ನು ಒಳಗೊಂಡಂತೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಆವಶ್ಯಕವಿರುವ ಕಾನೂನು ಸ್ವಯಂ ಸೇವಕರ ವಿವರಃ-**

| ಕ್ರ. ಸಂ. | ಕಾನೂನು ಸೇವೆಗಳ ಕಚೇರಿ | ಆಯ್ಕೆ ಮಾಡಬೇಕಾದ ಸಂಖ್ಯೆ |
|---|---|---|
| 01 | ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ | 50 |
| 02 | ಹರಿಹರ ತಾಲ್ಲೂಕು ಕಾನೂನು ಸೇವೆಗಳ ಸಮಿತಿ | 25 |
| 03 | ಚನ್ನಗಿರಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ | 25 |
| 04 | ಹೊನ್ನಾಳಿ ತಾಲ್ಲೂಕು ಕಾನೂನು ಸೇವೆಗಳ ಸಮಿತಿ | 25 |
| 05 | ಜಗಳೂರು ತಾಲ್ಲೂಕು ಕಾನೂನು ಸೇವೆಗಳ ಸಮಿತಿ | 25 |

**ವಿದ್ಯಾರ್ಹತೆಃ**

1) ಅಕ್ಷರಸ್ಥರಾಗಿದ್ದು ಕನಿಷ್ಟ ಪಕ್ಷ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು.
2) ಯಾವುದೇ ಘಟನೆ, ಪರಿಸ್ಥಿತಿ, ವಿಷಯಗಳನ್ನು ಉತ್ತಮವಾಗಿ ಗ್ರಹಿಸಬಲ್ಲವರಾಗಿರಬೇಕು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳುಃ**

1) ತಮ್ಮ ಹೆಸರು, ವಿಳಾಸ, ಇತ್ತಿಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿ ಸ್ವವಿವರವಿರುವ ಅರ್ಜಿ.
2) ವಿದ್ಯಾರ್ಹತೆಯ ದಾಖಲಾತಿಗಳು
3) ಕಾರ್ಯನಿರ್ವಹಿಸಲು ಇಚ್ಚಿಸುವ ಸ್ಥಳದ ಬಗ್ಗೆ ಸ್ವಇಚ್ಚೆ ಪತ್ರ.
4) ತಮ್ಮ ಮೊಬೈಲ್ ಸಂಖ್ಯೆಯನ್ನು ಅವಶ್ಯಕವಾಗಿ ನಮೂದಿಸತಕ್ಕದ್ದು.
5) ಮೇಲೆ ತಿಳಿಸಿರುವಂತೆ ಯಾವುದೇ ವಿಶೇಷ ವೃಂದದ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಆ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ.

---3

Scanned with OKEN Scanner

ಮೇಲ್ಕಂಡ ಆಯ್ಕೆಯು ತಾತ್ಕಾಲಿಕವಾಗಿರುತ್ತದೆ ಹಾಗೂ ಯಾವುದೇ ಸಂಬಳ-ವೇತನಗಳು ಇತ್ಯಾದಿಗಳು ಇರುವುದಿಲ್ಲ. ಕೇವಲ ಕಾರ್ಯನಿರ್ವಾಹಣೆಯ ಅವಧಿಗೆ ತಕ್ಕಂತೆ ಗೌರವಧನದ ಆಧಾರದ ಮೇಲೆ ನಿರ್ಧಿಷ್ಟ ಅವಧಿಗೆ ಮಾತ್ರ ಆಯ್ಕೆ/ನಿಯೋಜನೆ ಮಾಡಲಾಗುವುದು. ಅಭ್ಯರ್ಥಿಗಳು ಯಾವುದೇ ಆಧಾಯದ ಆಸೆಯಿಂದ ಅರ್ಜಿ ಸಲ್ಲಿಸತಕ್ಕದ್ದಲ್ಲ ಹಾಗೂ ಆಯ್ಕೆಯನ್ನು ಖಾಯಂಗೊಳಿಸುವ ಬಗ್ಗೆ ಅಥವಾ ಮುಂದುವರೆಸುವ ಬಗ್ಗೆ ಈ ಪ್ರಾಧಿಕಾರವು ಯಾವುದೇ ಆಶ್ವಾಸನೆ ನೀಡುವುದಿಲ್ಲ ಹಾಗೂ ಅಭ್ಯರ್ಥಿಗಳು ಈ ಬಗ್ಗೆ ಹಕ್ಕು ಮಂಡಿಸಲು ಅರ್ಹರಾಗಿರುವುದಿಲ್ಲ.

ಸ್ವಂತ ಕೈಬರಹದಲ್ಲಿ ಭರ್ತಿ ಮಾಡಿದ ಅರ್ಜಿ ಮತ್ತು ಸಂಬಂಧಪಟ್ಟ ದಾಖಲೆಯೊಂದಿಗೆ **"ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ಆಯ್ಕೆಗಾಗಿ ಅರ್ಜಿ"** ಎಂಬ ಶಿರ್ಷಿಕೆ ಬರೆದು **ಜಿಲ್ಲಾ ಪ್ರಾಧಿಕಾರದ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲು ಬಯಸುತ್ತೀರೋ ಅಥವಾ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲು ಬಯಸುತ್ತೀರೋ ಎಂದು ನಮೂಧಿಸಿ ಮುಚ್ಚಿದ** ಲಕೋಟೆಯಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಳೇ ನ್ಯಾಯಾಲಯದ ಆವರಣ, ಜನತಾ ಬಜಾರ್ ಪಕ್ಕ, ದಾವಣಗೆರೆ-577002 ಇಲ್ಲಿಗೆ ದಿನಾಂಕಃ 08-10-2025 ರ ಒಳಗಾಗಿ ಸಲ್ಲಿಸಲು ತಿಳಿಸಿದೆ.

ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ದೂರವಾಣಿ ಮೂಲಕ ತಿಳಿಸಲಾಗುವುದು.

ಜಿಲ್ಲಾ ಪ್ರಾಧಿಕಾರದ ಗೌರವಾನ್ವಿತ ಅಧ್ಯಕ್ಷರವರ ಆದೇಶದ ಮೇರೆಗೆ

15/9/25

ಪ್ರಭಾರ ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ದಾವಣಗೆರೆ.

Member Secretary (I/C)
District Legal Services Authority
Davangere.

Scanned with OKEN Scanner

## APPLICATION FOR THE POST OF PARA LEGAL VOLUNTEERS

To
The Member Secretary,
District Legal Services Authority/
Taluk Legal Services Committee,
.............................................Taluk,
.............................................District.

PASSPORT SIZE PHOTO

| | | | |
|---|---|---|---|
| 1. | Name of the applicant | : | |
| 2. | Father's/Mother's Name | : | |
| 3. | Age | : | |
| 4. | Sex (M/F/T/O) | : | |
| 5. | Address (a) Permanent | : | |
| 5. | Telephone Number | : | |
| | Mobile Number | : | |
| 7. | E-mail Address | : | |
| 8. | Qualification | : | |
| 9. | Computer Knowledge | : | |
| 10. | Category belongs to:<br>(Teachers/Rtd. Teachers,/Govt. Servants/MSW Student-Teacher/Anganawadi Worker/Students/Law Students/NGOs/Mahila Sangas/Educated Prisoners/Labourer/Tribal/Disability Person/Sex Workers/Sexual Minority Groups/Transpersons/Others) | : | |
| 11. | Willingness to work as PLV (Yes/No)<br>and Work Area<br>(District/Taluk/Rural Area) | : | |
| 12. | Activities in the Legal Services Authority (if any., Pls Mention) | : | |
| 13. | Caste<br>(if belongs to SC & ST, Pls attach copy of the caste certificate) | : | |
| 14. | Languages Known | : | |

I am aware of the rules of the Legal Services Authority and I am submitting my application to work voluntarily without expecting any income for service made as PLV.

Date:

Place: Signature of the applicant

## ಅರೆಕಾಲಿಕ ಸ್ವಯಂ ಸೇವಕರ ಹುದ್ದೆಗಾಗಿ ಅರ್ಜಿ

ಗೆ,

ಸದಸ್ಯ ಕಾರ್ಯದರ್ಶಿ,

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ ತಾಲ್ಲೂಕು ಕಾನೂನು ಸೇವೆಗಳ ಸಮಿತಿ,

ತಾಲ್ಲೂಕು

ಜಿಲ್ಲೆ..

ಭಾವಚಿತ್ರ

| | | | |
|---|---|---|---|
| 1. | ಅರ್ಜಿದಾರರ ಹೆಸರು | : | |
| 2. | ತಂದೆಯ/ ತಾಯಿಯ ಹೆಸರು | : | |
| 3. | ವಯಸ್ಸು | : | |
| 4. | ಲಿಂಗ (ಗಂ/ಹೆ//ತೃ/ಇ) | : | |
| 5. | ಖಾಯಂ ವಿಳಾಸ | : | |
| 5. | ದೂರವಾಣಿ ಸಂಖ್ಯೆ | : | |
| | ಮೊಬೈಲ್ ಸಂಖ್ಯೆ | : | |
| 7. | ಇ–ಮೇಲ್ ವಿಳಾಸ | : | |
| 8. | ವಿದ್ಯಾರ್ಹತೆ | : | |
| 9. | ಗಣಕ ಯಂತ್ರ ಜ್ಞಾನ ಹೊಂದಿರುವಿರಾ | : | |
| 10. | ಯಾವ ವರ್ಗಕ್ಕೆ ಸೇರಿರುವಿರಿ: (Teachers/Rtd. Teachers,/Govt. Servants/MSW Student-Teacher/Anganawadi Worker/Students/Law Students/NGOs/Mahila Sangas/Educated Prisoners/Labourer/Tribal/Disability Person/Sex Workers/Sexual Minority Groups/Transpersons/Others) | : | |
| 11. | ಅರೆಕಾಲಿಕ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲು ಒಪ್ಪಿಗೆ (ಇದೆ/ಇಲ್ಲ), ಇದೆ ಎಂದಾದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವ ಕಾರ್ಯಕ್ಷೇತ್ರ (ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟ) | : | |
| 12. | ಕಾನೂನು ಸೇವೆಗಳ ಪ್ರಾಧಿಕಾರ/ಸಮಿತಿಗಳ ಕಾರ್ಯ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸಿರುವಿರಾ (ವಿವರ) | : | |
| 13. | ಜಾತಿ [ಪ.ಜಾ./ಪ.ಪಂ/ಅಲ್ಪ ಸಂಖ್ಯಾತರು/ ಹಿಂದುಳಿದ ವರ್ಗ (ಪ್ರಮಾಣ ಪತ್ರ ಲಗತ್ತಿಸುವುದು)] | : | |
| 14. | ಇತರೆ | : | |

ಕಾನೂನು ಸೇವಾ ಪ್ರಾಧಿಕಾರದ/ ಸಮಿತಿಯ ನಿಯಮಗಳನ್ನು ತಿಳಿದಿದ್ದು, ಅವುಗಳಿಗೆ ಬದ್ಧನಾಗಿ/ಳಾಗಿ ಸೇವಾ ಮನೋಭಾವದಿಂದ ಉಚಿತವಾಗಿ ಸೇವೆ ಸಲ್ಲಿಸಲು ಇಚ್ಛಿಸಿ ಅರ್ಜಿ ಸಲ್ಲಿಸುತ್ತಿದ್ದೇನೆ.

ದಿನಾಂಕ:

ಸ್ಥಳ: ಅರ್ಜಿದಾರರ ಸಹಿ

# ಪ್ರಕಟಣೆ

ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಲ್ಲಿ ಅರೆಕಾಲಿಕ ಸ್ವಯಂ ಸೇವಕರ ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆ **Scheme for Para-Legal-Volunteers (Revised) & Module for the Orientation-Induction-Refresher Course for PLV Training** ರಂತೆ ಆಯ್ಕೆ ಪ್ರಕ್ರಿಯೆ ಜರುಗಲಿದ್ದು, ಈ ಕೆಳಕಂಡ ವರ್ಗ/ಗುಂಪುಗಳಲ್ಲಿ ಕಾರ್ಯನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪವಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲ್ಲೂಕು ಕಾನೂನು ಸೇವೆಗಳ ಸಮಿತಿಯನ್ನು ಸಂಪರ್ಕಿಸುವುದು.

**The Para-Legal-Volunteers can be selected from the following Groups:**

- Teachers/Retired Teachers.
- Former Panchayat Members.
- Retired Government servants from various Departments and senior citizens.
- Social Workers genuinely committed to legal aid initiatives.
- Women, Transgenders, Persons from Tribal Communities, Marginalized sections of society and other persons of high standing.
- M.S.W. Students and Teachers.
- Anganwadi Workers.
- Doctors/Physicians.
- Students & Law Studnets (till they enroll as lawyers).
- Members of non-political, service oriented NGOs and Clubs.
- Members of Women Neighbourhood Groups, Maithri Sanghams and other Self Help Groups including of marginalized/vulnerable groups.
- Educated prisoners with good behavior, serving long term sentencesin prisons.
- Widows of deceased defence personnel.
- Ex-servicemen or their dependents residing in civilian areas.
- Spouses or adult children of currently serving defence personnel.
- Any other person whom the District Legal Services Authority of Taluk Legal Services Committee deems fit to be identified as PLVs.